

## ರೋಗ ನಿರ್ಣಯ

ಕ್ಷಯ ರೋಗವನ್ನು ನಿರ್ಣಯಿಸುವುದು ಬಲು ಸುಲಭ. ವಿಶಿಷ್ಟ ರೋಗ ಲಕ್ಷಣಗಳೇ ಕಾಯಿಲೆ ಬಗ್ಗೆ ಸುಳಿವು ನೀಡುತ್ತವೆ. ಕಫವನ್ನು ಮೈಕ್ರೋ ಸ್ಕೋಪ್‌ನಲ್ಲಿ ವೀಕ್ಷಿಸಿದಾಗ, ಕ್ಷಯ ರೋಗಾಣುಗಳು ಕಂಡರೆ, ಕ್ಷಯರೋಗ ಅಂಟಿರುವುದು ಶತಾಂಶ ಋಜುವಾತು ಆದಂತೆ.

## ಚಿಕಿತ್ಸೆ ಏನು?

ಕ್ಷಯರೋಗ ಅಥವಾ ಟಿ.ಬಿ. ಪರಿಪೂರ್ಣವಾಗಿ ಗುಣವಾಗುತ್ತದೆ. ಈಗ ಪರಿಣಾಮಕಾರಿಯಾದ ಔಷಧಿಗಳು ಲಭ್ಯವಿವೆ. ಕ್ಷಯ ನಿವಾರಣ ಔಷಧಿ (ಮಾತ್ರೆ) ಗಳನ್ನು ಉಚಿತವಾಗಿ ಜನೆ ಮನೆ ಬಾಗಿಲಿಗೆ ತಲುಪಿಸುವ, ಅತ್ಯಂತ ಮಹತ್ವದ ಯೋಜನೆಯನ್ನು ಸರ್ಕಾರ ರೂಪಿಸಿದೆ.

ಟಿ.ಬಿ. ಕಾಯಿಲೆಗೆ ಚಿಕಿತ್ಸೆ ಪಡೆದರೆ ವ್ಯಕ್ತಿ ಸಂಪೂರ್ಣವಾಗಿ ರೋಗ (ಕ್ಷಯ)ದಿಂದ ಮುಕ್ತನಾಗುತ್ತಾನೆ. ಅಷ್ಟೇ ಅಲ್ಲ ಈತನಿಂದ ಕಾಯಿಲೆ ಇತರರಿಗೆ ಹರಡುವುದೂ ನಿಲ್ಲುತ್ತದೆ. ದೇಶದ ಎಲ್ಲಾ ಕ್ಷಯ ರೋಗಿಗಳು ಪತ್ತೆಯಾಗಿ, ಅವರೆಲ್ಲಾ ಚಿಕಿತ್ಸೆ ಪಡೆದರೆ ಟಿ.ಬಿ. ಕಾಯಿಲೆ ದೇಶದಿಂದ ತೊಲಗಿ ಹೋಗುವುದರಲ್ಲಿ ಅನುಮಾನವೇ ಇಲ್ಲ.

## ದೇಶದಲ್ಲಿ ಕ್ಷಯ ಏಕೆ ಕಡಿಮೆಯಾಗುತ್ತಿಲ್ಲ?

ಕ್ಷಯ ರೋಗ ನಿರ್ಮೂಲನೆಗೆ ದೇಶ ಕಟ್ಟು ಬಿದ್ದಿದೆ. ಕಂಕಣ ತೊಟ್ಟಿದೆ. ಕಾಯಿಲೆ ಪತ್ತೆ, ಚಿಕಿತ್ಸೆ ಮತ್ತು ಪುನರ್ವಸತಿ ಕೇಂದ್ರಗಳು ರೋಗಿಯ ಬಳಿಯೇ ದೊರಕುವಂತೆ ಮಾಡಿದೆ. ಆದರೂ ಬಹಳಷ್ಟು ರೋಗಿಗಳು ಸಾಮಾಜಿಕ ಕಾರಣಗಳಿಂದಾಗಿ ಚಿಕಿತ್ಸೆಗೆ ಬರುತ್ತಿಲ್ಲ. ತಾವೂ ಕಾಯಿಲೆಯಿಂದ ಮುಗ್ಧವಾಗಿ ಸಾಯುತ್ತಿದ್ದಾರೆ. ತಮಗೆ ತಿಳಿಯದೆ ಇತರರಿಗೂ ಕಾಯಿಲೆ ಅಂಟಿಸುತ್ತಿದ್ದಾರೆ. ಇದಕ್ಕಿಂತ ಭೀಕರ ಸಂಗತಿ ಎಂದರೆ ಕೆಲ ರೋಗಿಗಳು ಅರೆ ಬರೆ ಚಿಕಿತ್ಸೆ ಪಡೆದು ಯಾವುದೇ ಔಷಧಿಗೂ ಪ್ರತಿಭಟಿಸುವ (ರೆಸಿಸ್ಟಂಟ್) ಕ್ಷಯ ರೋಗಾಣುಗಳನ್ನು ಹೊರ ಹಾಕುತ್ತಿದ್ದಾರೆ. ಇಂತಹ ರೋಗಾಣುಗಳು ಅಂಟಿದರೆ ಚಿಕಿತ್ಸೆಯೂ ಗಗನ ಕುಸುಮ, ಸಾವೇ ಸತ್ಯ ಎನ್ನುವಂತಹ ಪರಿಸ್ಥಿತಿ ನಿರ್ಮಾಣಗೊಳ್ಳುತ್ತಿದೆ.

ಕ್ಷಯ ನಿರ್ಮೂಲನೆಗೆ ವಿಜ್ಞಾನ ಒಂದೇ ದಾರಿ ದೀಪವಾಗಿಲ್ಲ. ಬಡತನ, ಅಜ್ಞಾನ, ನಿರಕ್ಷರತೆ, ಕ್ಷಯದ ಬಗ್ಗೆ ಮೂಢನಂಬಿಕೆ, ಕೊಳಗೇರಿ ವಾಸ, ಅಪೌಷ್ಟಿಕತೆ, ವಲಸೆ ಜೀವನ, ಪರಿಸರ ಮಾಲಿನ್ಯ, ಉದ್ಯೋಗದ ಸ್ಥಳದ ಅಪಾಯಗಳು, ಧೂಮಪಾನ, ಮದ್ಯಪಾನ ಚಟ, ಹೆಚ್.ಐ.ವಿ. ಸೋಂಕು ಕಾಯಿಲೆಗಳ ಬಗ್ಗೆ ಅಸಡ್ಡೆ ಮುಂತಾದ ಹತ್ತು ಹಲವು ಸಾಮಾಜಿಕ ಕಾರಣಗಳು ಕ್ಷಯ ರೋಗವನ್ನು ಹಿಂಡಿ ಹಿಪ್ಪೆ ಮಾಡಿವೆ. ಕ್ಷಯ ರೋಗ ಚಿಕಿತ್ಸೆಯಿಂದ ಗುಣವಾಗುವುದಿಲ್ಲ ಎಂಬ ಮೂಢನಂಬಿಕೆಯಿಂದಾಗಿ ರೋಗಿಗಳು ಕ್ಷಯ ಕೇಂದ್ರದತ್ತ ಬರಲೂ ಹೆದರುತ್ತಾರೆ. ಹೀಗೆ ಹತ್ತು ಹಲವು ಸಾಮಾಜಿಕ ಕಾರಣಗಳೇ ಕ್ಷಯ ರೋಗ ನಿರ್ಮೂಲನೆಗೆ ದೊಡ್ಡ ಅಡೆತಡೆಯನ್ನೊಡ್ಡಿವೆ.

## ಎಲ್ಲೆಂದರಲ್ಲಿ ಉಗುಳುವ ಚಟ

ನಮ್ಮ ದೇಶದಲ್ಲಿ ಎಲ್ಲೆಂದರಲ್ಲಿ, ಯಾವಾಗಲೆಂದರೆ ಆವಾಗ ಉಗುಳುವ ಅಭ್ಯಾಸ ರೂಢಿಗತವಾಗಿದೆ. ಒಬ್ಬ ಕ್ಷಯ ರೋಗಿ ಕೆಮ್ಮಿ ಕ್ಯಾಕರಿಸಿ ಉಗುಳಿದನೆಂದರೆ ಅಸಂಖ್ಯಾತ ಕ್ಷಯ ರೋಗಾಣುಗಳು ಬಾಹ್ಯ ಪ್ರಪಂಚವನ್ನು ಸೇರಿ, ಆರೋಗ್ಯವಂತರಿಗೆ ಹೊಸತಾಗಿ ಕ್ಷಯ ತಗಲುತ್ತದೆ. ಹೀಗೆ ನಮ್ಮ ದೇಶದಲ್ಲಿ ಪ್ರತಿ ವರ್ಷ ಒಂದು ಲಕ್ಷ ಜನರಲ್ಲಿ 150 ರಿಂದ 200 ಜನರಿಗೆ ಕ್ಷಯ ರೋಗ ಹೊಸದಾಗಿ ಅಂಟುತ್ತಿದೆ. ಎಲ್ಲೆಂದರಲ್ಲಿ ಉಗುಳುವ ರೂಢಿಯನ್ನು ನಿಷೇಧಿಸದೆ, ಕ್ಷಯ ರೋಗವನ್ನು ನಿರ್ಮೂಲನೆ ಮಾಡುವುದು ಸಾಧ್ಯವಿಲ್ಲದ ಮಾತು.

ಕ್ಷಯ ನಿರ್ಮೂಲನೆಗೆ ಸರಕಾರ ಬದ್ಧವಾಗಿದೆ. ಇದು ಕೇವಲ ಸರಕಾರ ವೈದ್ಯಕೀಯ, ಆರೋಗ್ಯ ಕ್ಷೇತ್ರಗಳ ಬಾಧ್ಯತೆಗೆ ಸೀಮಿತವಾಗಿರದೆ. ಕ್ಷಯರೋಗವನ್ನು ನಿರ್ಮೂಲನೆ ಮಾಡುವ ಕೈಂಕರ್ಯದಲ್ಲಿ ನಮ್ಮ ಜವಾಬ್ದಾರಿಗಳೂ ಮಹತ್ವದ ಮೆಟ್ಟಿಲುಗಳಾಗಿವೆ. ಕ್ಷಯರೋಗದ ಬಗ್ಗೆ ಸಮಾಜದಲ್ಲಿ ಬೇರೂರಿರುವ ಮೌಢ್ಯತೆಗಳನ್ನು, ತಪ್ಪು ತಿಳುವಳಿಕೆಗಳನ್ನು, ಎಲ್ಲೆಂದರಲ್ಲಿ ಉಗುಳುವ ರೂಢಿಗಳನ್ನು ಬುಡಸಮೇತ ಕತ್ತರಿಸಿ ಎಸೆಯುವ ಹೊಣೆಗಾರಿಕೆ ನಮ್ಮ ಮೇಲಿದೆ. ಕ್ಷಯ ರೋಗದ ಲಕ್ಷಣವಿದ್ದವರೆಲ್ಲಾ ಚಿಕಿತ್ಸೆಗೆ ಒಳಪಡಿಸುವ, ಚಿಕಿತ್ಸೆ ತೆಗೆದುಕೊಳ್ಳುತ್ತಿರುವವರಿಗೆ ಚಿಕಿತ್ಸೆಯನ್ನು ಪರಿಪೂರ್ಣಗೊಳಿಸುವಂತೆ ಪ್ರೇರೇಪಿಸುವ ಮಹತ್ವದ ಕೆಲಸ ನಮ್ಮ ನಿಮ್ಮಿಂದ ಆಗಬೇಕು. ಹಾಗಾದಾಗ ಮಾತ್ರ ಇನ್ನೂ ಕೆಲವೇ ವರ್ಷಗಳಲ್ಲಿ 'ಕ್ಷಯ' ರೋಗ ನಿರ್ಮೂಲನೆಯಾಗಬಹುದು.

(ಲೇಖಕರು ತುಮಕೂರಿನ ಶ್ರೀದೇವಿ ಮೆಡಿಕಲ್ ಕಾಲೇಜಿನಲ್ಲಿ ಹಿರಿಯ ಪ್ರಾಧ್ಯಾಪಕರು. ಸಂಪರ್ಕ: 9844063563)

**ಭಾರತದಲ್ಲಿ 2.70 ದಶಲಕ್ಷ ಕ್ಷಯರೋಗಿಗಳಿದ್ದಾರೆ. ಕರ್ನಾಟಕದಲ್ಲಿ 2017ರ ಸಮೀಕ್ಷೆ ಪ್ರಕಾರ ಬೆಳಗಾವಿ ರಾಮನಗರ ಸೇರಿದಂತೆ ಒಟ್ಟು 11 ಜಿಲ್ಲೆಗಳಲ್ಲಿ 837 ಹೊಸ ಪ್ರಕರಣಗಳು ದಾಖಲಾಗಿವೆ. ಜಾಗತಿಕ ಲೆಕ್ಕ ತೆಗೆದುಕೊಂಡರೆ 2016ರಲ್ಲಿ 10 ದಶಲಕ್ಷ ಮಂದಿಗೆ ಕ್ಷಯ ಬಂದಿದ್ದು 1.3 ದಶಲಕ್ಷ ಜನ ಸಾವನ್ನಪ್ಪಿದ್ದಾರೆ. ಇವರಲ್ಲಿ ಶೇ.50ರಷ್ಟು ಪ್ರಕರಣಗಳು ಭಾರತ, ಚೀನಾ, ಇಂಡೊನೇಷಿಯಾ, ಪಾಕಿಸ್ತಾನ ಹಾಗೂ ಫಿಲಿಪ್ಪೀನ್ಸ್‌ಗಳಲ್ಲಿ ದಾಖಲಾಗಿತ್ತು. 2015ರಲ್ಲಿ ಅಂದಾಜು 1.8 ದಶಲಕ್ಷ ಮಂದಿ ಕ್ಷಯರೋಗಕ್ಕೆ ತುತ್ತಾಗಿದ್ದರು.**